## ದಿನಂಪ್ರತಿ ಅಪರಾಧಗಳ ಮಾಹಿತಿ ದಿನಾಂಕ: 21-10-2022

### ಕಮಲನಗರ ಪೊಲೀಸ್ ಠಾಣೆ ಅಪರಾಧ ಸಂಖ್ಯೆ 93/2022 ಕಲಂ 302 ಐಪಿಸಿ :-

ದಿನಾಂಕ 20/10/2022 ರಂದು 0600 ಗಂಟೆಗೆ ಶ್ರೀಮತಿ ಕಾವೇರಿ ಗಂಡ ಸಿದ್ರಾಮ ನಿಲಂಗೆ ವಯ 30 ವರ್ಷ ಜ್ಯಾತಿ ಲಿಂಗಾಯತ ಉ// ಮನೆಕೆಲಸ ಸಾ// ಖತಗಾಂವರವರು ಠಾಣೆಗೆ ಹಾಜರಾಗಿ ಲಿಖಿತ ದೂರು ನೀಡಿದರ ಸಾರಾಂಶವೇನೆಂದರೆ ಇವರ ತವರು ಮನೆ ನಾಗನಪಲ್ಲಿ ಇದ್ದು 2 ವರ್ಷಗಳ ಹಿಂದ ಖತಗಾಂವ ಗ್ರಾಮದ ಸಿದ್ರಾಮ ತಂದೆ ಮನ್ಮಥಪ್ಪಾ ನಿಲಂಗೆ ರವರ ಜೊತೆ ಮದುವೆಯಾಗಿದ್ದು ಇವರಿಗೆ ಒಂದು ಹೆಣ್ಣು ಮಗಳು ಪಲ್ಲವಿ ಅಂತಾ 8 ತಿಂಗಳ ವಯಸ್ಸಿನ ಮಗಳಿರುತ್ತಾಳೆ. ಗಂಡ ಸಿದ್ರಾಮನಿಗೆ ಈಗಾಗಲೆ ಮೊದಲನೆ ಹೆಂಡತಿಯ ಎರಡು ಮಕ್ಕಳು ಇರುತ್ತಾರೆ. ಗಂಡ ಮದುವೆಯಾದಾಗಿನಿಂದ ಹೈದ್ರಾಬಾದನಲ್ಲಿ ಕೂಲಿ ಮಾಡಿಕೊಂಡು ಇದ್ದು ಫಿರ್ಯಾದಿಗೆ ಬಾಡಿಗೆ ಮನೆಯಲ್ಲಿ ಇಟ್ಟಿದ್ದು ಈಗ ಸುಮಾರು 15 ದಿನಗಳ ಹಿಂದೆ ಪಿರ್ಯಾದಿ ಜೊತೆ ಕಿರಿ ಕಿರಿ ಮಾಡುತ್ತಿದ್ದರಿಂದ ಫಿರ್ಯಾದಿಯು ತನ್ನ ಮಗಳೊಂದಿಗೆ ಬೀದರಗೆ ಬಂದು ತಂದೆ ತಾಯಿಯ ಜೊತೆ ಇದ್ದು ಫಿರ್ಯಾದಿಯ ಫಿರ್ಯಾದಿಗೆ ಬಾ ಅಂತಾ ಅಂದಾಗ ಫಿರ್ಯಾದಿಯು ನನ್ನ ಅಕ್ಕ ತಂಗಿಯರು ಬಂದಿದ್ದಾರೆ ದೀಪಾವಳಿ ಹಬ್ಬ ಮಾಡಿ ಬರುತ್ತೆನೆ ಅಂತಾ ಫೋನನಲ್ಲಿ ಹೇಳಿದ್ದಾಗ ಗಂಡ ಇದೆ ಸಿಟ್ಟಿನಲ್ಲಿ ಹೈದ್ರಾಬಾದನಲ್ಲಿದ್ದ ಮನೆ ಖಾಲಿ ಮಾಡಿಕೊಂಡು ಖತಗಾಂವಕ್ಕೆ ಬಂದಿದ್ದು ನಂತರ ಗಂಡ ಮನೆ ಖಾಲಿ ಮಾಡಿಕೊಂಡು ಬಂದ ಬಗ್ಗೆ ವಿಷಯ ತಿಳಿದು ದಿನಾಂಕ 19/10/2022 ರಂದು ಮದ್ಯಾಹ್ನ 2 ಗಂಟೆಗೆ ಖತಗಾಂವಕ್ಕ ಬಂದು ಭಾವ ಹಣಮಂತ ಇತನ ಜೊತೆ ಸಿದ್ರಾಮನು ಜಗಳ ಮಾಡುತ್ತಿದ್ದು ಕಿರಿ ಕಿರಿ ಮಾಡುತ್ತಿದ್ದ ಬಗ್ಗೆ ತಿಳಿಸಿ ಪೊಲೀಸ ಠಾಣೆಗೆ ಬಂದು ಅವನಿಗೆ ಪೊಲೀಸರು ತಿಳಿಹೇಳಿದ್ದರೆ ಸರಿ ಹೊಗುತ್ತಾನೆ ಅಂತಾ ಕಮಲನಗರ ಪೊಲೀಸ ಠಾಣೆಗೆ ಸಾಯಂಕಾಲ 4 ಗಂಟೆಗೆ ಬಂದು ಹೇಳಿದ್ದು ಪೊಲೀಸರು ಅವನಿಗೆ ಫೊನ ಮುಖಾಂತರ ಕರೆಯಿಸಿದ್ದಾಗ ನನ್ನ ಗಂಡ ಸಿದ್ರಾಮ ಇವರು ನಮ್ಮ ಮಗಳಾದ ಪಲ್ಲವಿ ಇತಳಿಗೆ ನಮ್ಮ ಅತ್ತೆ ನಾಗಮ್ಮಾ ಇವಳ ಹತ್ತಿರ ಬಿಟ್ಟು ಅವರು ಕೂಡಾ ಕಮಲನಗರಕ್ಕೆ ಬಂದಿದ್ದು ಇಬ್ಬರಿಗೂ ಅಣ್ಣಾ ಸಂದೀಪ ತಂದೆ ರಮೇಶ ಬೆಲ್ದಾಳೆ, ತಾಯಿ ಮಂಗಲಾ ಗಂಡ ರಮೇಶ ಬಿಲ್ದಾಳೆ, ಪಾಂಡುರಂಗ ತಂದೆ ಧೋಂಡಿಬಾ ಕಣಜೆ, ಮಾಮ ಸಂಗಮೇಶ್ವರ ತಂದೆ ಮಾಣಿಕರಾವ ಬಿರಾದಾರ ಮು// ಜಾನಾಪೂರ ರವರು ತಿಳಿಹೇಳಿದ್ದು ನಂತರ ಎಲ್ಲರೂ ಖತಗಾಂವಕ್ಕೆ ರಾತ್ರಿ 07:00 ಗಂಟೆಯ ಸುಮಾರಿಗೆ ಹೊಗಿದ್ದಾಗ ಮನೆಯಲ್ಲಿ ಯಾರು ಇರಲಿಲ್ಲಾ ಗ್ರಾಮದಲ್ಲಿ ಹುಡುಕಾಡುತ್ತಾ ಹೊಗುತಿದ್ದಾಗ ಗ್ರಾಮದ ಜನರು ನಿಮ್ಮ ಅತ್ತೆ ಮಗುವಿಗೆ ಎತ್ತಿಕೊಂಡು ನಿಮ್ಮ ಹೊಲದ ಕಡೆ ಹೊಗಿದ್ದು ನೋಡಿರುತ್ತೆವೆ. ಅಂತಾ ಹೇಳಿದ್ದು ಹೊಲದ ಕಡೆ ಹೊಗಿದ್ದಾಗ ಗ್ರಾಮದ ಅನೀಲ ಬೆಲ್ದಾಳೆ ರವರ ಮನೆಯ ಹತ್ತಿರ ಇರುವ ಸಾರ್ವಜನಿಕ ಬಾವಿಯಲ್ಲಿ ಫೀರ್ಯಾದಿ ಅತ್ತೆ ನಾಗಮ್ಮಾ ಇವಳು ಫಿರ್ಯಾದಿಯ ಮಗಳಾದ ಪಲ್ಲವಿ 8 ತಿಂಗಳ ಮಗುವಿನೊಂದಿಗೆ ಬಾವಿಯಲ್ಲಿ ಹಾರಿ ಮಗುವಿಗೆ ನೀರಿನಲ್ಲಿ ಮುಳುಗಿಸಿ ಕೊಲೆ ಮಾಡಿ ತಾನು ಮೃತಪಟ್ಟಿದ್ದು ಇರುತ್ತದೆ. ಅಂತಾ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೋಳ್ಳಲಾಗಿದೆ.

### ಖಟಕಚಿಂಚೊಳ್ಳಿ ಪೊಲೀಸ್ ಠಾಣೆ ಅಪರಾಧ ಸಂಖ್ಯೆ 90/2022 ಕಲಂ 379 ಐಪಿಸಿ :-

ದಿನಾಂಕ: 20/10/2022 ರಂದು 13:00 ಗಂಟೆಗೆ ಪಿರ್ಯಾದಿ ಶ್ರೀ ಮಾಣಿಕರಾವ ತಂದೆ ಶಾಂತಪ್ಪ ಹಳ್ಳಿಖೇಡೆ ಸಾ: ಹೀಲಾಲಪೂರ ಸದ್ಯ ನೌಬಾದ ಬೀದರ ರವರು ಠಾಣೆಗೆ ಹಾಜರಾಗಿ ಲಿಖಿತ ದೂರು ನೀಡಿದರ ಸಾರಾಂಶವೆನೆಂದರೆ, ಇವರು ಸುಮಾರು 11 ವರ್ಷಗಳಿಂದ ಬೀದರ ಜಿಲ್ಲೆಯಲ್ಲಿನ ಇಂಡಸ್ ಕಂಪನೀಯ 270 ಟವರಗಳ ಪೆಟ್ರೋಲಿಂಗ್ ಸೂಪರವೈಜರ್ ಅಂತ ಕೆಲಸ ಮಾಡಿಕೊಂಡಿರುತ್ತಾರೆ, ಹೀಗಿರುವಾಗ ದಿನಾಂಕ: 19/10/2022 ರಂದು ಬೆಳಗಿನ ಜಾವ 1:30 ಎ.ಎಮ್ ಗಂಟೆಯ ಸುಮಾರಿಗೆ ಮೋಬೈಲ್ಗೆ ಗೋರ ಚಿಂಚೋಳಿ ಗ್ರಾಮದಲ್ಲಿನ ಏರಟೇಲ್ ರವರಿನ ಅಲರಾಮ ವಾರ್ನಿಂಗ್ ಬಂದ ಮೇರೆಗೆ ಕೂಡಲೆ ಭಾಲ್ಕಿಯಲ್ಲಿನ ಟವರಗಳ ಟೆಕ್ನಿಷಿಯನ್ ಆದ ಗುರುಲಿಂಗಯ್ಯಾ ತಂದೆ ಶಿವರಾಜ ಸ್ವಾಮಿ ಇತನಿಗೆ ಫೋನ್ ಮಾಡಿ ಕೂಡಲೆ ಗೋರಚಿಂಚೋಳಿ ಗ್ರಾಮದ ಏರಟೇಲ್ ಟವರಿಗೆ ಹೊಗಿ ಪರಿಶೀಲಿಸಲು ತಿಳಿಸಿರುತ್ತಾರೆ. ಅದರಂತೆ ಟೆಕ್ನಿಷಿಯನ್ ರವರು ಹೊಗಿ ಪರಿಶೀಲಿಸಿ ನೋಡಿ ಪುನ: ಮಾಹಿತಿ ನೀಡಿದ್ದೆನೆಂದರೆ, ಟವರಗಿಗೆ ಅಳವಡಿಸಿರುವ ಜನರೇಟರ್ ಡಿಸೇಲ್ ಖಾಲಿಯಾಗಿದ್ದರಿಂದ ವಾರ್ನಿಂಗ ಸೈನ್ ಬಂದಿದ್ದು ಜನರೇಟರಗೆ ಡಿಸೇಲ್ ಹಾಕಿ ಟವರ ಸ್ಟಾರ್ಟ ಮಾಡಿರುತ್ತೆನೆ. ಅಂತ ತಿಳಿಸಿ ಅಲ್ಲಿಂದ ಪುನಃ ಭಾಲ್ಕಿಗೆ ಹೊಗಿರುತ್ತಾನೆ. ನಂತರ ಪುನ: ಬೆಳಿಗ್ಗೆ 6:30 ಗಂಟೆಯ ಸುಮಾರಿಗೆ ಗೋರ ಚಿಂಚೋಳಿ ಗ್ರಾಮದಲ್ಲಿನ ಏರಟೇಲ್ ರವರಿನಲ್ಲಿನ ಅಲರಾಮ ವಾರ್ನಿಂಗ್ ಮೋಬೈಲ್ಗೆ ಬಂದ ಕೂಡಲೆ ಏರಟೇಲ್ ರವರಿನ ಹತ್ತಿರ ಹೊಗಿ ಪರಿಶೀಲಿಸಿ ಮಾಹಿತಿ ನೀಡಿದ್ದೆನೆಂದರೆ, ಟವರಗಿಗೆ ಅಳವಡಿಸಿರುವ ಅಮರಾಜ ಕಂಪನಿಯ 24 ಬ್ಯಾಟರಿಗಳು ನಾನು ಬೆಳಗಿನ ಜಾವ ಬಂದಾಗ ಇದ್ದಿದ್ದ

ಅವುಗಳನ್ನು ಇಗ ಯಾರೋ ಅಪರಿಚಿತ ಕಳ್ಳರು ಕಳುವು ಮಾಡಿಕೊಂಡು ಹೊಗಿರುತ್ತಾರೆ ಅಂತ ತಿಳಿಸಿರುತ್ತಾನೆ. ದಿನಾಂಕ: 19/10/2022 ರಂದು ಬೆಳಗಿನ ಜಾವ 2 ಎ.ಎಮ್ ಗಂಟೆಯಿಂದ 6:30 ಎ.ಎಮ್ ಗಂಟೆಯ ಮಧ್ಯದ ಅವಧಿಯಲ್ಲಿ ಯಾರೋ ಅಪರಿಚಿತ ಕಳ್ಳರು ಗೋರ ಚಿಂಚೋಳಿ ಗ್ರಾಮದಲ್ಲಿನ ಏರಟೇಲ್ ರವರಿಗೆ ಅಳವಡಿಸಿರುವ ಅಮರಾಜ ಕಂಪನಿಯ 24 ಬ್ಯಾಟರಿಗಳು ಅವುಗಳ ಅಂದಾಜು ಕಿಮ್ಮತ್ತು 24,000/- ರೂ ನೇದ್ದವುಗಳನ್ನು ಕಳವು ಮಾಡಿಕೊಂಡು ಹೋಗಿರುತ್ತಾರೆ ಅಂತಾ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೋಳ್ಳಲಾಗಿದೆ.